International Journal of Kannada Research 2024; 10(4): 44-47

International Journal of Kannada Research
www.kannadajournal.com

ISSN: 2454–5813
IJKR 2024; 10(4): 44-47
© 2024 IJKR
www.kannadajournal.com
Received: 09-08-2024
Accepted: 18-09-2024

**ತ್ಯಾಗರಾಜ ಹೆಚ್.ವಿ.**
ಸಂಶೋಧನಾರ್ಥಿ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಹಾವೇರಿ, ಕರ್ನಾಟಕ, ಭಾರತ

**ಡಾ. ಪಿ ನಾಗರಾಜ**
ಮಾರ್ಗದರ್ಶಕರು ಹಾಗೂ ಸಹ ಪ್ರಾಧ್ಯಾಪಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿಚನ್ನಮ್ಮ ವಿಶ್ವವಿದ್ಯಾಲಯ, ವಿದ್ಯಾಸಂಗಮ, ಬೆಳಗಾವಿ, ಕರ್ನಾಟಕ, ಭಾರತ

**Corresponding Author:**
**ತ್ಯಾಗರಾಜ ಹೆಚ್.ವಿ.**
ಸಂಶೋಧನಾರ್ಥಿ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಹಾವೇರಿ, ಕರ್ನಾಟಕ, ಭಾರತ

# ಪ್ರಾಚೀನ ಭಾರತದಲ್ಲಿ ವಿಶ್ವಕರ್ಮರು

**ತ್ಯಾಗರಾಜ ಹೆಚ್.ವಿ., ಡಾ. ಪಿ ನಾಗರಾಜ**

**DOI:** https://doi.org/10.22271/24545813.2024.v10.i4a.1053

**ಅಮೂರ್ತ**
ಚಾರಿತ್ರಿಕವಾಗಿ ವಿಶ್ವಕರ್ಮರ ಪರಂಪರೆಯನ್ನು ಗಮನಿಸುವುದಾದರೆ ಈಗಾಗಲೇ ಗುರ್ತಿಸಿರುವ ಹಾಗೆ ಇವರನ್ನು ಕಲೆಗಾರರು, ಶಿಲ್ಪಿಗಳು, ಲಿಪಿಕರು ಎಂದು ಗುರ್ತಿಸಲಾಗಿದೆ. ಈ ಕಲೆಗಾರರು, ಲಿಪಿಕಾರರು, ಶಿಲ್ಪಿಗಳು ಇಡೀ ಭಾರತದಾದ್ಯಂತ ಕಂಡುಬರುತ್ತಾರೆ. ಇವರು ರಾಜಪ್ರಭುತ್ವದ ಸನಿಹದಲ್ಲಿದ್ದವರಾಗಿದ್ದರು ಎಂಬುದಕ್ಕೆ ಅನೇಕ ಉದಾಹರಣೆಗಳನ್ನು ಗುರ್ತಿಸಬಹುದು. ಕಲೆ ಮತ್ತು ವಾಸ್ತುಶಿಲ್ಪ, ಬಿಲ್ಲುಬಾಣ, ರಥಗಳು, ದೇವಾಲಯಗಳ ನಿರ್ಮಾಣ, ಶಾಸನಗಳ ಕೆತ್ತನೆ ಮೊದಲಾದವುಗಳು ಇವರ ಮುಖ್ಯ ಕಸುಬಾಗಿತ್ತು. ಇದನ್ನು ದೈವಕಾರ್ಯವೆಂತಲೂ ಇವರು ಭಾವಿಸಿಕೊಂಡಿದ್ದರು. ಇದು ಅಂದಿನ ಕಾಲಘಟ್ಟದ ಆಯಾ ರಾಜಪ್ರಭುತ್ವದ ಹೆಗ್ಗುರುತುಗಳೂ ಸಹ ಆಗಿದ್ದವು. ಈ ಹಿನ್ನೆಲೆಯಲ್ಲಿ ಪ್ರಾಚೀನ ಭಾರತದ ಸಂದರ್ಭದಲ್ಲಿ ಮೌರ್ಯ, ಮಗದ ಕಾಲಘಟ್ಟದಿಂದ ಹಿಡಿದು ಕರ್ನಾಟಕದ ಅರಸು ಮನೆತನವಾದ ವಿಜಯನಗರ ಸಾಮ್ರಾಜ್ಯದ ಕಾಲಘಟ್ಟದವರೆವಿಗೂ ಇವರ ಪರಂಪರೆಯ ಹರಹನ್ನು ಕಾಣಬಹುದು. ಪ್ರಸ್ತುತ ಲೇಖನದಲ್ಲಿ ಪ್ರಾಚೀನ ಭಾರತದ ಸಂದರ್ಭದಲ್ಲಿ ವಿಶ್ವಕರ್ಮರು ಹೇಗೆ ತಮ್ಮ ಹೆಜ್ಜೆಗುರುತುಗಳನ್ನು ಸ್ಥಾಪಿಸಿದ್ದಾರೆ ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

**ಮುಖ್ಯಸೂಚಿಪದಗಳು:** ರಾಜಪ್ರಭುತ್ವ, ವಿಶ್ವಕರ್ಮರು, ಕಲೆ ಮತ್ತು ವಾಸ್ತುಶಿಲ್ಪ, ಕಲೆಗಾರರು, ಶಿಲ್ಪಿಗಳು, ದೈವೀಕಾರ್ಯ, ಶಾಸನ, ರಾಜಾಜ್ಞೆ

**ಪೀಠಿಕೆ**
ಮೌರ್ಯರ ಕಾಲಘಟ್ಟದಲ್ಲಿ ವಿಶ್ವಕರ್ಮರ ಹೆಜ್ಜೆ ಗುರುತುಗಳನ್ನು ಗುರ್ತಿಸಬಹುದು. ಇಡೀ ಭಾರತದಲ್ಲಿ ದೊರೆಯುವ ಶಾಸನಗಳಿಂದ ಇವರ ಕಾಲಘಟ್ಟವು ಅತಿಮುಖ್ಯವಾಗುತ್ತೆ. ಅದರಲ್ಲಿಯೂ ಅಶೋಕನು ತನ್ನ ಆಳ್ವಿಕೆಯ ಸಂದರ್ಭದಲ್ಲಿ "ಶಾಸನಪತ್ಯ ರಚನೆಕಾರರು, ಶಾಸನ ಕಂಡರಣೆಕಾರರು, ಶಿಲ್ಪಿಗಳು ಮತ್ತು ವಾಸ್ತು ಶಾಸ್ತ್ರತಜ್ಞರ ಸಮೂಹಗಳನ್ನು ಅವಲಂಬಿಸಬೇಕಾಯಿತು"[1]. ಆ ಮೂಲಕ ತನ್ನ ಆದೇಶಗಳನ್ನು, ಆಜ್ಞೆಗಳನ್ನು ಜನಸಮೂಹಕ್ಕೆ ತಲುಪುವಂತೆ ಮಾಡುತ್ತಿದ್ದನು. ಹಾಗೂ ತನ್ನ ಪ್ರಭುತ್ವವನ್ನು ಗಟ್ಟಿಗೊಳಿಸಿಕೊಳ್ಳುತ್ತಿದ್ದನು. ಅಶೋಕನಿಗೆ ಮೂರು ಬಗೆಯ ಕಲೆಗಾರರ ಅವಶ್ಯಕತೆ ಇದ್ದಿತು. ಅವರೆಂದರೆ– "1. ಶಾಸನ ಪಾಠವನ್ನು ರಚಿಸುವ ಸುಶಿಕ್ಷಿತರು. 2. ಭಾವಗಳನ್ನು ದೃಶ್ಯರೂಪಕ್ಕೆ ಅಳವಡಿಸುವ ಸಲುವಾಗಿ ವಾಸ್ತುಶಾಸ್ತ್ರ ತಜ್ಞ; ಶಿಲ್ಪಿ ಮತ್ತು ಕಲ್ಲು ಕತ್ತರಿಸುವ ಕಲೆಗಾರರು. 3. ಶಾಸನ ಪಾಠವನ್ನು ಕಲ್ಲುಗಳ ಮೇಲೆ ಕೆತ್ತುವ ಕಂಡರಣೆಕಾರರು. ರಾಜಾಜ್ಞೆಗಳನ್ನು ಶಾಸನಪಾಠಗಳನ್ನಾಗಿ ರಚಿಸುವ ಮತ್ತು ಮೌರ್ಯ ಸಾಮ್ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ ಪ್ರದರ್ಶಿಸುವ ತಂತ್ರವು ವಿಶೇಷವಾಗಿ ಬಾಹಿ ಮತ್ತು ಖರೋಷ್ಠಿ ಲಿಪಿಗಳು ಕ್ರಮಬದ್ಧಗೊಳ್ಳುತ್ತಿರುವ ಆ ಕಾಲದಲ್ಲಿ ತುಂಬ ಸಂಕೀರ್ಣವಾಗಿದ್ದಿತು."[2]
ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ಶಾಸನಗಳನ್ನು ಕೆತ್ತಿಸಿದವನು ಅಶೋಕನೇ ಆಗಿದ್ದಾನೆ. ತನ್ನ ಸಾಮ್ರಾಜ್ಯದಲ್ಲಿ ಜನರ ತಿಳುವಳಿಕೆಗಾಗಿ ಅನೇಕ ಶಾಸನಗಳನ್ನು ಕೆತ್ತಿಸಿದ್ದಾನೆ. ಅವು ದಕ್ಷಿಣ ಭಾರತದ ಕರ್ನಾಟಕದವರೆಗೂ ಹಬ್ಬಿರುವುದು ಕಂಡುಬರುತ್ತದೆ. ಅಶೋಕನು ತನ್ನ ರಾಜ್ಯದಲ್ಲಿ ಪ್ರಮುಖವಾಗಿ ಬಳಸುತ್ತಿದ್ದ ಭಾಷೆ ಪ್ರಾಕೃತ ಹಾಗೂ ಬಳಸುತ್ತಿದ್ದ ಲಿಪಿ ಬ್ರಾಹ್ಮಿ ಲಿಪಿಯಾಗಿತ್ತು. ಜೊತೆಗೆ ಈ ಪ್ರಾಕೃತ ಹಾಗೂ ಬ್ರಾಹ್ಮಿ ಲಿಪಿ ತಿಳಿಯದ ಪ್ರದೇಶಗಳಲ್ಲಿ ಅಶೋಕನು ಖರೋಷ್ಠಿ, ಗ್ರೀಕ್ ಮತ್ತು ಅರೈಮೈಕ್ ಗಳನ್ನ ಬಳಸುತ್ತಿದ್ದುದು ಕಂಡುಬರುತ್ತದೆ. ಈ ಬಗೆಯ ಯಾವ ಪ್ರಯೋಗಗಳೂ ಇಲ್ಲದ ಕಾಲದಲ್ಲಿ

ಅಶೋಕನು ಒಂದು ಮೈಲುಗಲ್ಲನ್ನು ನಿರ್ಮಿಸುವ ಮೂಲಕ ತನ್ನದೇ ಆದ ಮಾರ್ಗವನ್ನು ಕಂಡುಕೊಳ್ಳುತ್ತಾನೆ. ಅದಕ್ಕಾಗಿಯೇ ತನ್ನ ಅವನು ರಾಜಾಜ್ಞೆಗಳನ್ನು ಬರೆಸುತ್ತಿದ್ದನು. ಅವುಗಳನ್ನು ಶಾಸನಗಳ ರೂಪದಲ್ಲಿ ಕಂಡರಣೆಕಾರರ ಮೂಲಕ ಕೆತ್ತಿಸಿ ನಿಲ್ಲಿಸುತ್ತಿದ್ದನು. ಈ ಬಗೆಯ ಶಾಸನಗಳು ತನ್ನ ರಾಜ್ಯದ "ಅಧಿಕಾರಿಗಳಿಗೆ ಮತ್ತು ಬರಹಗಾರರಿಗೆ ಅವರು ನಿಗದಿತ ತಾಣಗಳಿಗೆ ತೆರಳುವ ಮೊದಲು ಅಶೋಕನು ನೀಡುತ್ತಿದ್ದ ಸೂಚನೆಗಳು ಧರ್ಮಪ್ರಸಾರದ ಸಮರ್ಪಕ ಜಾರಿಯ ಕುರಿತಾದ ಅವನ ಕಾಳಜಿಯನ್ನು ವ್ಯಕ್ತಪಡಿಸುತ್ತವೆ. ಬಹುಶಃ ನಿಮ್ಮ ನಡುವಿನ ಒಬ್ಬರು ನಾನು ನಿಮ್ಮಿಂದ ಏನನ್ನು ನಿರೀಕ್ಷಿಸುತ್ತೇನೆ ಎಂಬುದನ್ನು ತಿಳಿದಿರಬಹುದು. ಆದರೆ ಆ ಒಬ್ಬನು ಸಹಿತ ಅದನ್ನು ಭಾಗಶಃ ತಿಳಿದಿರಬಹುದೇ ಹೊರತು ಪೂರ್ಣ ಪ್ರಮಾಣದಲ್ಲಿ ಅಲ್ಲ. ಯಾವನು ಜಡಬುದ್ಧಿಯವನಾಗಿರುವನೋ ಅವನು ಸರಿಯಾಗಿ ಕರ್ತವ್ಯ ನಿರ್ವಹಿಸಲಾರ. ನಿಮ್ಮ ಅಧಿಕೃತ ಕರ್ತವ್ಯದಲ್ಲಿ ನೀವು ಸಮರ್ಪಕವಾಗಿ ಕರ್ತವ್ಯ ನಿರ್ವಹಿಸಬೇಕು, ವರ್ತಿಸಬೇಕು ಮತ್ತು ಕರ್ತವ್ಯವನ್ನು ಪೂರೈಸಬೇಕು"[3]. ಈ ಹಿನ್ನೆಲೆಯಲ್ಲಿ ಮೌರ್ಯ ಸಾಮ್ರಾಜ್ಯದಲ್ಲಿ ಅನೇಕ ಬಗೆಯ ಕಲೆಗಾರರು ಇದ್ದರು ಎಂಬುದು ಅಧ್ಯಯನದಿಂದ ಕಂಡುಬರುತ್ತದೆ. ಪ್ರೊ. ಷ. ಶೆಟ್ಟರ್ ಗುರ್ತಿಸುವ ಹಾಗೆ ಮೌರ್ಯ ಸಾಮ್ರಾಜ್ಯದಲ್ಲಿ ಹಲವು ಬಗೆಯ ಕಲೆಗಾರರಿದ್ದರು ಎಂಬದನ್ನು ಹೀಗೆ ಹೇಳುತ್ತಾರೆ. 1. ಹರಪ್ಪಾ ಸಂತತಿಯ ದೂರದ ಸಂಬಂಧಿಗಳಾಗಿದ್ದು ನಂತರದ ಶತಮಾನಗಳಲ್ಲಿ ಮೆಗಾಲಿಥಿಕ್ ವಾತಾವರಣದಲ್ಲಿ ವಿಲೀನರಾದ ಮೂಲದ ಅಥವಾ ದೇಸೀಯ ಕಲೆಗಾರರು. 2. ಈ ಮೊದಲು ಹೆಲೆನಿಕ್ (ಗಾಂಧಾರ) ಮತ್ತು ಅಕಾಮೆನಿಡ್ ಪರ್ಶಿಯನ್ (ಪಶ್ಚಿಮ ಏಶಿಯಾ) ಪ್ರಭಾವಕ್ಕೆ ಒಳಗಾಗಿದ್ದ ಸ್ಥಳೀಯ ಕಲೆಗಾರರು. 3. ಸಾಂಪ್ರದಾಯಿಕ ಜನಪದರು ಅಥವಾ ಗ್ರಾಮೀಣ ಕಲೆಗಾರರು. 4. ದೇಸೀಯ ಮತ್ತು ಅಕಾಮೆನಿಡ್ ಪರಂಪರೆಗಳಿಗೆ ಸೇರಿದ್ದು ತಮ್ಮ ಪಥ್ಯ ಸಾಧನ ಮತ್ತು ತಂತ್ರಗಳನ್ನು ಬದಲಿಸಲು ಇಚ್ಛಿಸದ ಪರಿಶುದ್ಧ ಕಲೆಗಾರರು. 5. ಹೊಸತನಕ್ಕೆ ಮತ್ತು ಸವಾಲುಭರಿತ ಅವಕಾಶಗಳಿಗೆ ಎದುರಾಗಲು ಕಾಯುತ್ತಿದ್ದ ಕಲೆಗಾರರು. ಇವರೆಲ್ಲರ ಹೆಜ್ಜೆ ಗುರುತುಗಳನ್ನು ಈ ಕೆಳಗಿನ ಆಧಾರಗಳ ಮೂಲಕ ಗುರುತಿಸಬಹುದು. 1. ಮುಖ್ಯ, ಗೌಣ, ಸ್ತಂಭ, ಗುಹೆ ಮತ್ತು ವಿಶೇಷ ರಾಜಾಜ್ಞೆಗಳು, 2. ಅಲಂಕಾರ ಫಲಕ ಮತ್ತು ಉಂಗುರಾಕಾರದ ಕಲಾಕೃತಿಗಳು. 3. ಕಲ್ಲಿನಲ್ಲಿ ಕೆತ್ತಲಾದ ಗುಹೆಗಳು, 4. ಸ್ತೂಪ, ಚೈತ್ಯಗಳನ್ನೊಳಗೊಂಡ ರಚನಾತ್ಮಕ ನಿರ್ಮಾಣಗಳು 5. ಅರಮನೆ, ಸಾರ್ವಜನಿಕ ಕೆಲಸಗಳು, ಹೊಂಡಗಳು, ಝುರಿಗಳು ಮತ್ತು ಇತರ ಸಾಮಾಜಿಕ ಮತ್ತು ನಾಗರಿಕ ಸೇವೆಗಳು.

ಅಶೋಕನ ಕಾಲಘಟ್ಟದಲ್ಲಿ ಶಾಸನಗಳನ್ನು ಕೆತ್ತುವುದಕ್ಕೆ ಕಂಡಣೆಕಾರರನ್ನು ನೇಮಿಸಿಕೊಂಡಿದ್ದನು ಎಂಬುದು ಗಮನೀಯ. ಅಂದರೆ ಕಳಿಂಗ ಯುದ್ಧ ಮತ್ತು ಸಂಬೋಧಿ ಭೇಟಿಯ ನಡುವಿನ ಅವಧಿಯಲ್ಲಿ ಅಶೋಕನು ಅನೇಕ ಪರ್ಶಿಯನ್ ಸ್ಮಾರಕಗಳನ್ನು (ದೊರೆ ಡೇರಿಯಸ್ನ ಕಾಲದವು ಮತ್ತು ಇಂಡಸ್ ಮೇಲ್ಭಾಗ ಪ್ರದೇಶದ ಅಕ್ಯಾಮೆನಿಡ್ ಕಲೆಗಾರರ ಕೆಲವು ರಚನೆಗಳನ್ನು ನೋಡಿದಂತೆ ತೋರುತ್ತದೆ. ಆದ್ದರಿಂದ ಯುದ್ಧದಿಂದ ತಲ್ಲಣಿಸಿದ ರಾಜ್ಯವನ್ನು ಪುನರುದ್ಧರಿಸಲು ಪ್ರಯತ್ನಿಸಿದ. ಅಕ್ಯಾಮೆನಿಡ್ ಶೈಲಿಯ ರಚನೆಗಳನ್ನು ತನ್ನ ಸಾಮ್ರಾಜ್ಯದಲ್ಲಿ ವಿಸ್ತರಿಸಲು ಪ್ರಯತ್ನಿಸಿದ. ಅಂತಹ ಶೈಲಿಗಳು ಎಲ್ಲಿ ಮತ್ತು ಹೇಗೆ ಬಳಸಿಕೊಂಡನೆಂಬುದರ ರಹಸ್ಯ ಕಥೆಯನ್ನು ಅವನು ಹೊರಡಿಸಿದ ರಾಜಾಜ್ಞೆಗಳು ತೆರೆದಿಡುತ್ತವೆ. "ಗ್ರೀಕ್ ರಾಜಾಜ್ಞೆಯ ಬರಹಗಳಿಗಾಗಿ ಇಬ್ಬರು, ಅರೆಮೈಕ್ ರಾಜಾಜ್ಞೆಯ ಬರಹಗಳಿಗಾಗಿ ಐವರು, ಖರೋಷ್ಠಿ ರಾಜಾಜ್ಞೆಯ ಬರಹಗಳಿಗಾಗಿ ಮೂವರು ಕಂಡರಣೆಕಾರರನ್ನು ಬಳಸಿದುದಕ್ಕೆ ಹೋಲಿಸಿ ನೋಡಿದರೆ ಸುಮಾರು 36 ಕೇಂದ್ರಗಳಲ್ಲಿ ಬರೆಸಿದ ಬ್ರಾಹ್ಮ ರಾಜಾಜ್ಞೆಗಳಿಗಾಗಿ ಅಶೋಕನು ದೊಡ್ಡ ಸಂಖ್ಯೆಯ ಕಂಡರಣೆಕಾರರನ್ನು ಬಳಸಿದುದು ಕಂಡುಬರುತ್ತದೆ. ಅಷ್ಟೇ ಅಲ್ಲದೇ ಭಾರತದಲ್ಲಿಯೂ ಸಹ ಈ ಬಗೆಯನ್ನು ಅನುಸರಿಸಿದ. ಅಂದರೆ ರಾಜ್ಯದ ವಾಯುವ್ಯಭಾಗಕ್ಕೆ ಸೀಮಿತವಾದಂಥ ಗ್ರೀಕ್, ಅರೈಮಿಕ್ ಮತ್ತು ಖರೋಷ್ಠಿ ಬರಹಗಳನ್ನು ಮಾತ್ರ ಸ್ಥಳೀಯ ಕಂಡರಣೆಕಾರರು ಕಂಡರಿಸಿದ್ದರೇ ಹೊರತು ವಿಸ್ತಾರವಾದ ರಾಜ್ಯದ ಇತರ ಪ್ರದೇಶಗಳಲ್ಲಿ ಹರಡಿದ ಪ್ರಾಕೃತ – ಬ್ರಾಹ್ಮಿ ರಾಜಾಜ್ಞೆಗಳನ್ನಲ್ಲ. ಅದುವರೆಗೆ ಅಪರಿಚಿತವಾಗಿದ್ದು ಕೇವಲ ಸ್ಥಳೀಯ ಸಂವಹನಕ್ಕೆ ಮಾತ್ರ ಸೀಮಿತವಾಗಿದ್ದ ಖರೋಷ್ಠಿ ಭಾಷೆ ಮತ್ತು ಲಿಪಿಯನ್ನು ಉನ್ನತೀಕರಿಸಿದ ಕೀರ್ತಿ ಮತ್ತು ಅಲ್ಪ ಪ್ರಮಾಣದಲ್ಲಿ ಪರಿಚಿತವಾಗಿದ್ದ ಪ್ರಾಕೃತ ಭಾಷೆ ಮತ್ತು ಬ್ರಾಹ್ಮ ಲಿಪಿಯನ್ನು ದೂರದ ವಾಯುವ್ಯದ ಗಾಂಧಾರ ದೇಶದವರೆಗೆ ಹರಡಿದ ಕೀರ್ತಿ ಅಶೋಕನಿಗೆ ಸಲ್ಲಬೇಕು. ಅವನು ಮನಸ್ರೆಹಾದಲ್ಲಿ ಒಂದು ಮತ್ತು ಶಹಾಬಾಜಗರಿಯಲ್ಲಿ ಒಂದು ಹೀಗೆ ಎರಡು ಮುಖ್ಯ ಖರೋಷ್ಠಿ ರಾಜಾಜ್ಞೆಗಳನ್ನು ಬರೆಯಿಸಿದ್ದಾನೆ. ಅದೇ ರೀತಿ ಪ್ರಾಕೃತ – ಬ್ರಾಹ್ಮಿ ಮಿಶ್ರಿತ ಸ್ತಂಭ ಶಾಸನವನ್ನು ಲಂಪಾಕ್‌ನ ಆಗ್ನೆಯ ದಿಕ್ಕಿನಲ್ಲಿರುವ ಬುನೇರ್‌ನಲ್ಲಿ ನಿಲ್ಲಿಸಿದ್ದಾನೆ."[4] ಇದನ್ನು ಗಮನಿಸಿದಾಗ ಅಶೋಕನು ಕಲೆಗಾರರ ಮೂಲಕ ಅರ್ಥಾತ್ ಲಿಪಿಕಾರರ ಮೂಲಕ ಪ್ರಾಕೃತ, ಬ್ರಾಹ್ಮಿ, ಖರೋಷ್ಠಿ ಗ್ರೀಕ್ ಭಾಷೆಗಳಲ್ಲಿ ಶಿಲಾಸ್ಥಂಭಗಳನ್ನು ನಿಲ್ಲಿಸಿದ್ದುದರ ಬಗೆಗೆ ಅನೇಕ ಉಲ್ಲೇಖಗಳಿವೆ. ಅಶೋಕನ ಕಾಲಘಟ್ಟದಲ್ಲಿ ಒಬ್ಬ ಅರೆಮೈಕ್ ದಿಪಿರ್ ಎಂಬ ಕಂಡಣೆಕಾರನಿರುವುದು ಕಾಣಬಹುದು. ತನ್ನ ರಾಜ್ಯದ ಉತ್ತರದ ಗಡಿಯಲ್ಲಿರುವ ಲಗಮಾನ್ ಪರ್ವತ ಪ್ರದೇಶದಲ್ಲಿ ತನ್ನ ಸಂಕ್ಷಿಪ್ತ ಸಂದೇಶವನ್ನು ಎರಡು ಅರೆಮೈಕ್ ಉಪಭಾಷೆಗಳಲ್ಲಿ ಪ್ರದರ್ಶಿಸುವ ಸಲುವಾಗಿ ಅಶೋಕನು ಒಬ್ಬ ಸ್ಥಳೀಯ ಬರಹಗಾರನನ್ನು ಬಳಸಿಕೊಂಡಿದ್ದನು. ಈ ಶಾಸನವು ತನ್ನ ಕಂಡರಣೆಕಾರನ ಹೆಸರನ್ನು 'ದಿಪಿ' ಎಂದು ಉಲ್ಲೇಖಿಸಿದೆ. 'ದಿಪಿ' ಎಂಬ ಹೆಸರೇ ದಪಿರ್ ಎಂಬುದಿರಬಹುದು ಎಂದು ಷ. ಶೆಟ್ಟರ್ ಅಭಿಪ್ರಾಯಪಡುತ್ತಾರೆ. ಅಷ್ಟೇ ಅಲ್ಲದೇ ಎ. ಎಚ್. ದಾನಿ ಅವರು ಅಶೋಕನ ಕಾಲದಲ್ಲಿದ್ದ ಲೇಖಕರ ಮತ್ತು ಕಂಡರಣೆಕಾರರ ಕುರಿತಾದ ಮಹತ್ವದ ಕೆಲವು ಸಂಗತಿಗಳನ್ನು ತಿಳಿಸಿದ್ದಾರೆ. (ದಾನಿ – 1997: 32–35) ಅವರ ವಿಚಾರಗಳು ಹೀಗಿವೆ: ಎಂಬುದನ್ನು ತಮ್ಮ ಸ್ಥಪತಿ ಎಂಬು ಕೃತಿಯಲ್ಲಿ ದಾಖಲಿಸಿದ್ದಾರೆ. ಲೇಖಕನಿಗೂ ಕಂಡಣೆಕಾರನಿಗೂ ವ್ಯತ್ಯಾಸವನ್ನು ಗುರ್ತಿಸುವ ಒಂದು ಶಿಲಾ ಶಾಸನವೂ ಇದೆ ಅಂತಹ ವ್ಯತ್ಯಾಸಗಳನ್ನು ಹೀಗೆ ಕಾಣಬಹುದು.

1. ಲೇಖಕನಾದವನು ಶಾಸನ ಪಾಠದ ಬರವಣಿಗೆಯನ್ನು ನಿರೂಪಿಸುತ್ತಿದ್ದನೇ ಹೊರತು ಕಂಡರಣೆಕಾರನಾಗಿರಲಿಲ್ಲ. ಏಕೆಂದರೆ ಕಂಡರಣೆಕಾರನ ಪಾತ್ರ ಗೌಣವಾದುದಾಗಿದ್ದಿತು.
2. ನಂತರ ಆ ಶಾಸನ ಪಾಠವನ್ನು ಲಿಪಿಕಾರನು ಕಲ್ಲಿನ ಮೇಲೆ ಬರೆಯುತ್ತಿದ್ದನು. ಅದರ ನಂತರ ಕಂಡರಣೆಕಾರನು ಅಕ್ಷರಗಳನ್ನು ಕೆತ್ತುತ್ತಿದ್ದನು.
3. 'ಅಶೋಕನ ಕಾಲದ ಕಂಡರಣೆಕಾರರು ಅಶಿಕ್ಷಿತರಾಗಿದ್ದ ಕಾರಣ ಲೇಖಕನ ಉದ್ದವಾದ ಸಾಲುಗಳನ್ನು ಅವು ಇದ್ದಂತೆ (Blindly) ಮಾತ್ರ ಕೆತ್ತುತ್ತಿದ್ದರು ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

ಅದು ಏನಿದ್ದರೂ ಹದಿನಾಲ್ಕನೆಯ ಸ್ತಂಭ ಶಾಸನದಲ್ಲಿ ಅಶೋಕನು ಕಂಡರಣೆಕಾರನಿಗೆ (ಲೇಖಕನಿಗಲ್ಲ) ನೀಡಿದ ಕೆಲವು ಸೂಚನೆಗಳು ಲೇಖನ ಮತ್ತು ಕಂಡರಣೆಕಾರರ ಪಾತ್ರಗಳು ಬೇರೆ ಬೇರೆ ಅಲ್ಲ, ಅದು ಸಂಯುಕ್ತ ರೂಪದ್ದು ಎಂಬ ಅರ್ಥವನ್ನು ಕೊಡುತ್ತವೆ.

ಒಟ್ಟಾರೆ ಮೌರ್ಯರ ಕಾಲಘಟ್ಟದಲ್ಲಿ ವಿಶ್ವಕರ್ಮರನ್ನು ಪ್ರತಿಪಾದಿಸುವ ಲೇಖಕ ಅಥವಾ ಕಂಡಣೆಕಾರ ಹೇಗೆ ಒಳಗೊಳ್ಳುತ್ತಿದ್ದ ಎಂಬುದನ್ನು ಕಾಣಬಹುದು. ಕೆಲವೊಂದೆಡೆ ಧಾರ್ಮಿಕ 'ಧಮ್ಮ ಶಾಸನವು ಸಂಕ್ಷಿಪ್ತತೆ, ಸಾಧಾರಣ ಉದ್ದ ಮತ್ತು ವಿಸ್ತರಿಸಲಾದ ವರದಿಗಳು ಇವುಗಳಿಂದ ಕೂಡಿರುತ್ತದೆ. ಕೆಲವೆಡೆ ಕೆಲವು ವಾಕ್ಯ ಅಥವಾ ವಾಕ್ಯಾಂಗಗಳು ಕೆತ್ತಲಾರದೆ ಉಳಿದಿರಬಹುದು. ಅಶೋಕನ ಸಾಮ್ರಾಜ್ಯವು ಬಹು ವಿಸ್ತಾರವಾಗಿರುವ ಕಾರಣ ಅವನ ಕಾಘಟ್ಟದಲ್ಲಿ ಕೆತ್ತಲಾದ ಶಾಸನಗಳು ನಾಡಿನಾದ್ಯಂತ ವಿಸ್ತರಿಸಿಕೊಡಿವೆ. ಅವುಗಳನ್ನು ಬರೆಯಿಸುವ ನೆಲೆಯಲ್ಲಿಯೇ ವಿಶ್ವಕರ್ಮರನ್ನು ಪ್ರತಿನಿಧಿಸುವ ಶಾಸನಕಾರನು ಓದುಬರಹ ಬಲ್ಲವನಲ್ಲದಿದ್ದರೂ ಆ ಕಾಲದ ಬರೆಹವನ್ನು ಬಂಡೆಗಲ್ಲುಗಳಲ್ಲಿ ಕೆತ್ತುವ ಕೈಂಕರ್ಯದಲ್ಲಿ ನಿರತನಾಗಿರುತ್ತಿದ್ದ ಎಂಬುದು ತಿಳಿಸುಬರುತ್ತದೆ. ಇದೂ ಸಹ ಒಂದು ಬಗೆಯ ಕರಕುಶಲ ಕಲೆ ಎಂದೇ ದಾಖಲಿಸಬಹುದು.

ಗಂಗರ ರಾಜ್ಯದಲ್ಲಿ ವಿಶ್ವಕರ್ಮರು ಮುಖ್ಯ ಸ್ಥಾನವನ್ನು ಪಡೆದುಕೊಂಡಿದ್ದರು. ಇವರು ಕಾಂಭೋಜ– ಗಾಂಧಾರ ಪ್ರದೇಶದ ಯೋನಕ ಕಲೆಗಾರರಾಗಿದ್ದರು. ಕಲೆಯೆ ಇವರ ವೃತ್ತಿಯಾಗಿದ್ದರಿಂದ ಕಲೆಯ ಮೂಲಕವೇ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳುತ್ತಿದ್ದರು. ಇವರು 'ತಕ್ಷಶಿಲಾ, ಚುನಾರ, ಪಾಟಲೀಪುತ್ರ, ಗಿರನಾರ ಮತ್ತು ಬ್ರಹ್ಮಗಿರಿಗಳತ್ತ ದೇಶಾಟನೆಗೆ ಬಂದುದರ ಸೂಚನೆಯು ಅವರು ಬಳಸಿದ ಬರವಣಿಗೆಯ (ಅಕ್ಷರ) ಮೂಲಕ ಅಥವಾ ಅವರು ನಿರ್ಮಿಸಿದ ಸ್ಮಾರಕಗಳ ಮೂಲಕ ಸೂಚಿತವಾಗುತ್ತದೆ. "ಮೌರ್ಯರು ಪಡೆದುಕೊಳ್ಳುತ್ತಿದ್ದ ಮರಳು ಶಿಲೆ (Sand Stone) ಪ್ರಮುಖ ತಾಣವಾಗಿದ್ದ ಚುನಾರ್ನಲ್ಲಿ ದೊರೆತ ಕೆಲವು ಖರೋಷ್ಠಿ ಬರಹಗಳು ನಮ್ಮ ಗಮನವನ್ನು ಸೆಳೆಯುತ್ತವೆ. ಸಾಗಾಣಿಕೆಗಾಗಿ ಸಿದ್ಧಪಡಿಸಿದ ಘನಾಕೃತಿಯ ಶಿಲೆಯಲ್ಲಿ ಕೆತ್ತಿದ ಅಥವಾ ಶಿಲಾಫಲಕದ ಮೇಲೆ ಕೆತ್ತಿದ ವಿನ್ಯಾಸಗಳು ತೀರಾ ಸಣ್ಣ ಪ್ರಮಾಣದಲ್ಲಿವೆ. ಇಂಥ ಅನೇಕ ಅವಶೇಷಗಳು ಕುಶಲಕರ್ಮಿಗಳ ಬಗ್ಗೆ ಮತ್ತು ಸಾಗಾಣಿಕೆದಾರರ ಬಗ್ಗೆ ಸುಳಿವು ನೀಡುತ್ತವೆ. ಅವು ಸಾಂಕೇತಿಕ ಶಬ್ದಗಳಲ್ಲಿ ಇವೆಯಾದರೂ ಅವು ಸುತ್ತಲಿನ ಪ್ರದೇಶದ ಮೇಲೆ, ಅಲ್ಲಿಯ ಸ್ಥಿತಿಗತಿಗಳ ಮೇಲೆ ಮತ್ತು ಕುಶಲಕರ್ಮಿಗಳ ವೈಯಕ್ತಿಕ ಮತ್ತು ಸಾಮುದಾಯಿಕ ಜೀವನ ವಿಧಾನಗಳ ಮೇಲೆ ಬೆಳಕು ಬೀರುತ್ತವೆ. ಸರಳವಾದ ಅವರ ಜೀವನ ವಿಧಾನ ಮತ್ತು ಸ್ಥಳೀಯ ಸಂವಾದಗಳ ಕೆಲವು ಸುಳಿವುಗಳನ್ನು ಅವುಗಳಿಂದ ಕಂಡುಕೊಳ್ಳಬಹುದು. ಬಹುಶಃ ಅವು ದಕ್ಷಿಣ ಏಶಿಯಾದ ಇತಿಹಾಸದಲ್ಲಿ ದಾಖಲಾಗಿರುವ ದುಡಿಯುವ ವರ್ಗದ ಜನರ ಮೊದಲ ಧ್ವನಿಗಳಾಗಿರಬಹುದು. ಹಕ್ಸ್ ಎಂಬ ಕಾರ್ಮಿಕನ ಮಗನೂ ಸದಾಜರನ ಅನುಯಾಯಿಯೂ ಆಗಿದ್ದ ಸಮದಾನೊ ಎಂಬಾತ ಮತ್ತು ಇವರಿಬ್ಬರ ಸಹೋದ್ಯೋಗಿಯಾಗಿದ್ದ ಎಥಕ ಎಂಬುವನು ಆ ಗುಂಪಿನಲ್ಲಿದ್ದ ಬಗ್ಗೆ ತಿಳಿದು ಬರುತ್ತದೆ."[5]

**ಈ ಕಾಲಘಟ್ಟದಲ್ಲಿ ವಿಶ್ವಕರ್ಮರ ಸ್ಥಾನಮಾನ:** ಅಶೋಕನ ಆಡಳಿತದ ಕಾಲಘಟ್ಟದಲ್ಲಿ ವಿಶ್ವಕರ್ಮರಿಗೆ ಸಾರ್ವಜನಿಕವಾಗಿ ಮನ್ನಣೆಯಿತ್ತು. ಸಾರ್ವಜನಿಕರು ದಾನದತ್ತಿಗಳನ್ನು ನೀಡುತ್ತಿದ್ದರು. ಕೆಲವರು ದಾನದತ್ತಿ ನೀಡಿದವರ ದಾಖಲಾತಿಯು ಉಲ್ಲೇಖಿಸಲ್ಪಡುತ್ತಿತ್ತು. ಅಂತಹ ಹಲವು ದಾಖಲೆಗಳು ಕ್ವಚಿತ್ತಾಗಿ ಅಶೋಕನ ಕಾಲಘಟ್ಟದಲ್ಲಿ ದಾಖಲಾಗಿರುವುದು ಕಂಡುಬರುತ್ತದೆ. ಇದಕ್ಕೆ ಉದಾಹರಣೆಯಾಗಿ ಎರಡು ಶಾಸನಗಳು ಉಲ್ಲೇಖನೀಯ. ಅವರೆಂದರೆ 'ರಾಣಿಯ ಹೆಸರಿನಲ್ಲಿ (ರಾಣಿ ಕಾಲುವಾಕಿ ಮತ್ತು ಅವಳ ಮಗ ಕುಮಾರ ತಿವಾಲ) ಮತ್ತು ಇನ್ನೊಂದು ಕಿರು ಶಾಸನದಲ್ಲಿ ಪಂಗುರಿರಾಯ ಎಂಬ ರಾಜನೇ ಸ್ವತಃ ಕುಮಾರ ಸಂದ್ವ ಎಂಬ ವ್ಯಕ್ತಿಯ ಹೆಸರಿನಲ್ಲಿ ಶಾಸನ ಕೆತ್ತಿಸಿದುದು ಕಂಡುಬರುತ್ತದೆ. ಇವನ್ನು ಬಿಟ್ಟರೆ ಬೇರೆ ಯಾವ ಶಾಸನದಲ್ಲಿಯೂ ಬೇರೆ ವ್ಯಕ್ತಿಗಳ ಹೆಸರುಗಳು ನಮಗೆ ಕಂಡುಬರುವುದಿಲ್ಲ' (ಶೆಟ್ಟರ್ – 2003–45, ಎನ್–24) ಅದೇ ರೀತಿ ರಾಜ್ಯದ ಗಡಿ ಪ್ರದೇಶದಲ್ಲಿ ಕೆಲಸ ಮಾಡಿದ ಕಂಡರಣೆಕಾರನ ವಿಷಯದಲ್ಲಿಯೂ ಇಂಥ ಅಪವಾದವಿರುವುದು ನಮಗೆ ಕಂಡುಬಂದಿದೆ. ಆದರೆ "ದಕ್ಷಿಣ ಭಾರತದ ದಾಖಲಿತ ಇತಿಹಾಸದಲ್ಲಿ 'ಚಪಡ'ನೆಂಬ ಶಿಲ್ಪಿಯ ಹೆಸರು ಮೊದಲಿಗೆ ಕಂಡುಬಂದಿರುವುದು ವಿಶೇಷ ಉದಾಹರಣೆಯಾಗಿದೆ. ಅವನು ಕರ್ನಾಟಕದ ಈಗಿನ ಚಿತ್ರದುರ್ಗ ಜಿಲ್ಲೆಯ ಸುಮಾರು ನಾಲ್ಕು ಕಿಲೋಮೀಟರ್ ವ್ಯಾಪ್ತಿಯ ಪ್ರದೇಶದಲ್ಲಿ ಮೂರು ಬ್ರಾಹ್ಮಿ ಶಾಸನಗಳನ್ನು ಕೆತ್ತಿದ್ದಾನೆ. ಅವನು ಖರೋಷ್ಠಿ ಭಾಷಿಕ ಪ್ರದೇಶವಾದ ವಾಯುವ್ಯ ಭಾರತಕ್ಕೆ ಸೇರಿದವನೇ ಹೊರತು ಸ್ಥಳೀಯನಲ್ಲ. ಖರೋಷ್ಠಿ ಲಿಪಿಯಲ್ಲಿ ಬರೆಯಲಾದ ಶಾಸನದ ಕೊನೆಗೆ ಬಲದಿಂದ ಎಡಕ್ಕೆ ಬರೆಯಲಾದ ಸಾಲಿನಲ್ಲಿ ಅವನು ಇದನ್ನು ತಿಳಿಸಿದ್ದಾನೆ. ಅಷ್ಟೇ ಅಲ್ಲದೆ ಅಶೋಕನು ತಲ್ಲಾ, ಕುಲಾರ್ ಮತ್ತು ಪತ್ರದಲ್ಲಿ ಮಾತ್ರವಲ್ಲದೆ ಗುಜರಾತ್ (ರವಾ) ಮತ್ತು ದಕ್ಷಿಣ (ಆಂದ್ರಪ್ರ ಮತ್ತು ಕರ್ನಾಟಕ) ದಲ್ಲಿಯೂ ಅನೇಕ ಜನ ಖರೋಷ್ಠಿ, ಲಿಪಿಕಾರರನ್ನು ದುಡಿಸಿಕೊಂಡಿದ್ದಾನೆ. ಖರೋಷ್ಠಿಯನ್ನು ಬ್ರಾಹಿಯಲ್ಲಿ ಬರೆಯುವುದನ್ನು ಸಹ ರೂಢಿಸಿಕೊಂಡಿದ್ದ (ಬಲದಿಂದ ಎಡಕ್ಕೆ ಬರೆಯುವುದು) ಇಂಥ ಲಿಪಿಕಾರರನ್ನು ಹೊರತುಪಡಿಸಿ, ಸ್ಥಪತಿಗಳು ಮತ್ತು ವಾಸ್ತುತಜ್ಞರು ತಾವು ಕೆತ್ತಿದ ಶಾಸನಗಳಲ್ಲಿ ತಮ್ಮ ಹೆಸರುಗಳನ್ನು ದಾಖಲಿಸುವ ಅವಕಾಶ ಹೆಚ್ಚು ಜನರಿಗೆ ದೊರೆತಂತಿಲ್ಲ. ಆದಾಗ್ಯೂ ಅಪವಾದಗಳು ಕಂಡುಬರುತ್ತವೆ. ಒಬ್ಬ ಶಿಲ್ಪಿಯ ಹೆಸರು ಮತ್ತು ಒಬ್ಬ ಕಲೆಗಾರನ ಹೆಸರು ದಾಖಲೆಗಳಲ್ಲಿ ಉಳಿದುಕೊಂಡಿವೆ."[6]

ಬೌದ್ಧ ಜಾತಕಗಳು ವಿಗ್ರಹ ನಿರ್ಮಾತೃಗಳನ್ನಲ್ಲದೆ ಬಡಿಗರು ಲೋಹಕಾರರು (ಪಾಂಚಾಳರು), ವರ್ಣಚಿತ್ರಕಾರರು (ಮಹಾ ಉಮಗ ಜಾತಕ) ಹಸಿದಂತದಲ್ಲಿ ಕೆತ್ತನೆ ಮಾಡುವವರು (ಶಿಲಾವನಾಗ ಜಾತಕ) ನಿವೇಶನ ಶೋಧಕರು (ಗಾಮಿನಿ ಚಂದಜಾತಕ) ಮುಂತಾದ 22 ಬಗೆಯ ಕುಶಲಕರ್ಮಿಗಳ ಗುಂಪು (ಸಂಘ)ಗಳಿದ್ದುದನ್ನು ಗುರುತಿಸಿವೆ. ಉದಾಹರಣೆಗಾಗಿ ಮುನ್ನಸ ಜಾತಕವು ಪ್ರಸೇನಜಿತು ರಾಜನು ಗೋಶೀರ್ಷ ಚಂದನದಲ್ಲಿ (Ox headed Sandal wood) ಒಂದು ಬುದ್ಧನ ವಿಗ್ರಹವನ್ನು – ಶ್ರಾವಸ್ತಿಯಲ್ಲಿ ನಿರ್ಮಿಸಿದ್ದ ಬಗ್ಗೆ ಮತ್ತು ಕೌಶಂಬಿಯ ಉದಯನ ದೊರೆಯು ಮೌದ್ಗಲ್ಯಾಯನಪತ್ರ ಎಂಬ ಸೂತ್ರಧಾರನಿಗೆ, ಮೈಮೇಲೆ ಎಲ್ಲ ಪವಿತ್ರ ಚಿಹ್ನೆಗಳನ್ನು ಹೊಂದಿದ ಬುದ್ಧನ ವಿಗ್ರಹವನ್ನು ನಿರ್ಮಿಸಲು ಆದೇಶಿಸಿದ್ದನೆಂಬುದನ್ನು ತಿಳಿಸುತ್ತದೆ.

ಒಟ್ಟಾರೆ ಪ್ರಾಚೀನ ಭಾರತದಲ್ಲಿ ವಿಶ್ವಕರ್ಮರು ಲಿಪಿಕಾರರಾಗಿ, ಕಂಡಣೆಕಾರರಾಗಿ ತಮ್ಮನ್ನು ತಾವು ಗುರ್ತಿಸಿಕೊಂಡಿದ್ದರು. ಆದರೆ ಇವರು ಸಮಾಜದ ಮುಖ್ಯವಾಹಿಯಲ್ಲಿರಲಿಲ್ಲ. ಮತ್ತು ಇವರು ಸಮಾಜದ ಮುಖ್ಯಸ್ಥಾನದಲ್ಲಿರಲಿಲ್ಲ ಎಂಬುದು ಸತ್ಯ. ಅಷ್ಟೇ ಅಲ್ಲದೇ ಇವರಿಗೆ ಹೆಚ್ಚು ವಿದ್ಯಾಭ್ಯಾಸವೂ ಸಹ ಇರಲಿಲ್ಲ ಎಂಬುದು ಅಧ್ಯಯನದಿಂದ ತಿಳಿದುಬರುತ್ತದೆ. ಆದರೆ ಇವರು ಸುಶಿಕ್ಷಿತರು ಬರೆದಿರುವ ಬರಹದ ಚಿನ್ಹೆಗಳನ್ನು ಇವರು ಕೆತ್ತುವ ಕಾರ್ಯವನ್ನು ಮಾಡುತ್ತಿದ್ದರು. ಇವರ ಈ ಕುಶಲತೆಯಿಂದಲೇ ಶಾಸನಗಳು ರೂಪುಗೊಂಡವು. ಇವುಗಳಿಂದಲೇ ದೇಶದ ಚರಿತ್ರೆಯನ್ನು ರೂಪಿಸಲು ಸಹಾಯಕವಾದವು. ವಿಶ್ವಕರ್ಮರ ಈ ಕಲೆಗಾರಿಕೆಯು ದೇಶದ ಸಾಂಸ್ಕೃತಿಕ ನಿರ್ಮಾನದಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

**ಅಡಿ ಟಿಪ್ಪಣಿ**

1. ಷ. ಶೆಟ್ಟರ್ – ಸ್ಥಪತಿ, ಅಭಿನವ ಪ್ರಕಾಶನ, ಬೆಂಗಳೂರು, ಪುಟ–33
2. ಅದೇ, ಪುಟ–33
3. ಅದೇ, ಪುಟ –34
4. ಅದೇ, ಪುಟ –34
5. ಷ. ಶೆಟ್ಟರ್ – ರುವಾರಿ, ಅಭಿನವ ಪ್ರಕಾಶನ, ಬೆಂಗಳೂರು, ಪುಟ–37
6. ಅದೇ, ಪುಟ – 39

**ಪರಾಮರ್ಶನ ಗ್ರಂಥಗಳು**

1. ವಿಶ್ವಕರ್ಮ ಸಾಹಿತ್ಯ ಸಂಪದ ಭಾಗ–1 – ಡಾ.ಕೆ.ಪಿ. ಈರಣ್ಣ: ಶ್ರೀ ವಿಶ್ವಮಯ ಸಾಹಿತ್ಯ ಪ್ರಚಾರ ಸಮಿತಿ, ಹುಬ್ಬಳ್ಳಿ
2. ಸಾಹಿತ್ಯ ಸಂಪದ ಭಾಗ–2 –ಡಾ. ಕೆ.ಪಿ. ಈರಣ್ಣ: ಶ್ರೀ ವಿಶ್ವಮಯ ಸಾಹಿತ್ಯ ಪ್ರಚಾರ ಸಮಿತಿ, ಹುಬ್ಬಳ್ಳಿ
3. ವೈಶ್ವಕರ್ಮಣ ಪರಂಪರ –ಡಾ। ಮತ್ತೂರು ಕೃಷ್ಣಮೂರ್ತಿ: ಶ್ರೀ ವಿಶ್ವಮಯ ಸಾಹಿತ್ಯ ಪ್ರಚಾರ ಸಮಿತಿ, ಹುಬ್ಬಳ್ಳಿ
4. ವೈಶ್ವಕರ್ಮಣ ಧರ್ಮ ದರ್ಪಣ –ಶ್ರೀ ಬಿ.ಎ. ಸಾಲಿಶಾಸ್ತ್ರಿ: ಶ್ರೀ ವಿಶ್ವಮಯ ಸಾಹಿತ್ಯ ಪ್ರಚಾರ ಸಮಿತಿ, ಹುಬ್ಬಳ್ಳಿ
5. ವಿಶ್ವಕರ್ಮ ದರ್ಶನ, ಮಲ್ಲೇಪುರಂ ಜಿ. ವೆಂಕಟೇಶ: ಶ್ರೀ ವಿಶ್ವಮಯ ಸಾಹಿತ್ಯ ಪ್ರಚಾರ ಸಮಿತಿ, ಹುಬ್ಬಳ್ಳಿ
6. ಬೃಹತ್ ಕರ್ನಾಟಕದ ಶಿಲ್ಪಾಚಾರಿಗಳ ಚರಿತೆ – ಡಾ. ಕೆ. ಎಸ್. ಕುಮಾರ ಸ್ವಾಮಿ, ಕಣ್ವ ಪ್ರಕಾಶನ, ಬೆಂಗಳೂರು.
7. ಸ್ಥಪತಿ – ಪ್ರೊ. ಷ. ಶೆಟ್ಟರ್, ಅಭಿನವ ಪ್ರಕಾಶನ, ಬೆಂಗಳೂರು